ನನಗೊಂದು ಗೀಳಾಯಿತು. ಅದಕ್ಕೆ ಅವನ ಸೌಂದರ್ಯವೂ ಕಾರಣವೇನೋ... ನಾನು ಅವನೊಂದಿಗೆ ಮಾತುಕತೆ ನಡೆಸುತ್ತಾ ಬಾಲ್ಯದ ಒತ್ತಡಗಳಿಂದ ಪಾರಾಗಲು ಹವಣಿಸುತಿದ್ದೆ.

ಎಂಟನೇ ಇಯತ್ತೆಯಿಂದ ನಮಗೆ ಆಕಾಶ ಕಾಯಗಳ ಬಗ್ಗೆ ಪಠ್ಯವಿತ್ತು. ನನಗೆ ಆಗಿನಿಂದಲೂ ಬಹಳ ಆಸಕ್ತಿಯ ವಿಷಯವದು. ನಮ್ಮ ಅಧ್ಯಾಪಕರು ರಾತ್ರಿಗಳಲ್ಲಿ ವಿವಿಧ ನಕ್ಷತ್ರಗಳನ್ನು ಗುರುತಿಸಲು ಹೇಳುತ್ತಿದ್ದರು. ನನಗ್ಯಾವಾಗಲೂ ಬೇರೆ ಬೇರೆ ಗ್ರಹಗಳಿಗೆ ಹಲವು ಉಪಗ್ರಹಗಳಿವೆ... ಭೂಮಿಗೆ ಯಾಕೆ ಹಲವು ಚಂದಿರರಿಲ್ಲ ಅಂತ ದುಃಖ ಆಗ್ತಿತ್ತು. ನಾನು ಪಿಯುಸಿ ಓದುವಾಗ, ನನ್ನಕ್ಕ ಸುಮನಾ ಇಂಗ್ಲಿಷ್ ಮೇಜರ್ ಓದುತ್ತಿದ್ದಳು. ಅವಳು ಇಂಗ್ಲಿಷ್‌ನಲ್ಲಿ ಕವಿತೆ ಬರೆಯುತ್ತಿದ್ದರಿಂದ ಕವಿತೆ ಅಂದ್ರೇನೆ ಇಂಗ್ಲಿಷ್‌ನಲ್ಲಿ ಬರೆಯಬೇಕೇನೋ ಅಂತ ನಾನೂ ಅಂದುಕೊಂಡಿದ್ದೆ. ನನ್ನ ಮೊದಲ ಪದ್ಯ ಚಂದ್ರನ ಮೇಲೆ ಬರೆದದ್ದು. 'ಮೈ ವಿಂಡೋ ಕಂಪ್ಯಾನಿಯನ್' ಎಂದು. ಅದನ್ನು ಜೋಸೆಫ್ ಮೇಷ್ಟ್ರು ತಿದ್ದಿ ಕಾಲೇಜು ಮ್ಯಾಗಜೀನ್‌ನಲ್ಲಿ ಪ್ರಕಟಿಸಿದರು. ಚಂದಿರನ ಜೊತೆಯ ಒಡನಾಟ ಇವತ್ತಿಗೂ ಮುಂದುವರೆದುಕೊಂಡೆ ಬಂದಿದೆ. ತಪ್ಪಿದ್ದೇ ಇಲ್ಲ. ಕೇಳಿದವರಿಗೆ ಅದೊಂದು ನನಗೆ ಹಿಡಿದ ಮಾನಸಿಕ ಗೀಳು ಎಂದೇ ಹೇಳುವೆ. ಇವತ್ತಿಗೂ ರಾತ್ರಿ ನಾನು ಮಲಗುವಾಗ ಹನ್ನೆರಡು ಗಂಟೆಯಾಗುತ್ತದೆ. ಆಗ ಹೊರಗೆ ಹಿತ್ತಿಲಿಗೆ ಹೋಗಿ ಚಂದಿರನ ದರುಶನ ಮಾಡಿಯೇ ಮಲಗುವೆ.

- **ನಿಮ್ಮ ಪ್ರಕಾರ ಯಶಸ್ವಿ ಕವಿತೆಯ ಮಾನದಂಡವೇನು? ಕವಿ ತನ್ನ ಜೀವದ್ರವ್ಯವನ್ನು ಧಾರೆಯೆರೆದು ಮಹತ್ವಾಕಾಂಕ್ಷೆಯ ಉತ್ತುಂಗದಲ್ಲಿ ಬರೆದಿದ್ದೆ? ಅಥವಾ ಲೋಕ ಇನ್ನಿಲ್ಲದಂತೆ ಮೆಚ್ಚಿಕೊಂಡದ್ದೆ? ಅಥವಾ ಇವೆರಡೂ ಏಕಕಾಲದಲ್ಲಿ ಒಟ್ಟಾಗಿ ಸಂಭವಿಸಿದ್ದೆ?**

ಬರೆದವರ ಪಾಲಿಗೆ ಅವರು ಬರೆದುದೆಲ್ಲವೂ ಒಳ್ಳೆಯ ಕವಿತೆಯೆ. ಇದಕ್ಕಿಂತ ಮುಖ್ಯವಾಗಿ ಸ್ವತಃ ನನಗೇ ಕವಿತೆ ಬರೆಯೋದು ಬಹಳ ಮಹತ್ವದ್ದು ಅಂತ ಅನಿಸ್ತಾ ಇಲ್ಲ. ಜಗತ್ತಲ್ಲಿ ಏನೇನೋ ನಡಿತಾ ಇರತ್ತೆ. ಒಳಗಿನ ಒತ್ತಡಗಳಿಂದ ಹೊರಬರಬೇಕಲ್ಲ. ಅದಕ್ಕೆ ಮನುಷ್ಯರಿಗೆ ಒಂದೊಂದು ಮಾಧ್ಯಮ ಬೇಕು. ಪ್ರತಿಯೊಬ್ಬರೂ ಹೀಗಾಗಿ ಏನೇನೋ ಹೊರಬರುವ ದಾರಿ ಕಂಡುಕೊಂಡಿರ್ತಾರೆ. ಅದರಲ್ಲಿ ಒಂದು ಸಣ್ಣ ಗುಂಪು ಕವಿತೆಯನ್ನು ಹೊರಬರುವ ದಾರಿಯಾಗಿ ಕಂಡುಕೊಂಡಿದೆ. ಕೆಲವರಿಗೆ ಮನೆ ಸ್ವಚ್ಛಗೊಳಿಸುವುದೆ ಅಂಥದೊಂದು ದಾರಿ. ನಾನಂತೂ ಕವಿತೆ ರಚನೆಗಿಂತ ಮನೆ ಸ್ವಚ್ಛಗೊಳಿಸುವುದನ್ನು ಯಾವುದೇ ರೀತಿಯಲ್ಲಿ ಕೀಳು ಎಂದು ಅಂದುಕೊಂಡೆ ಇಲ್ಲ.

ದಾಸರ ಪದಗಳು, ತತ್ತ್ವ ಪದಗಳು, ವಚನಗಳು, ಜನಪದ ಗೀತೆಗಳು ಇವನ್ನೆಲ್ಲ ಓದಿದ ನಂತರ... ಯಾವುದೇ ಕವಿತೆಯನ್ನಾಗಲೀ ಇದು ನನ್ನದೇ ಕವಿತೆ ಎಂದು ಹೇಳುವುದೇ ಅರ್ಥಹೀನವಾಗಿ ಕಾಣುತ್ತದೆ.. ಇವರೆಲ್ಲ ಹೇಳಿದನ್ನೇ ನಾವು ನಮ್ಮ ನಮ್ಮ ನುಡಿಗಟ್ಟನಲ್ಲಿ ಹೇಳ್ತಾ ಇದೀವಿ ಅಷ್ಟೆ. ಇದರಲ್ಲಿ ಯಾವುದನ್ನೂ ನನ್ನ ಕವಿತೆ ಅಂತ ಛಾಪು ಹಾಕ್ಕೊಳ್ಳಿಕ್ಕೆ ಸಾಧ್ಯವೇ ಇಲ್ಲ ಅನಿಸತ್ತೆ. ಒಂದು ಹಣತೆ ಇನ್ನೊಂದು ಹಣತೆಯನ್ನು, ಇನ್ನೊಂದು ಮತ್ತೊಂದನ್ನು ಬೆಳಗುವ ಪ್ರಕ್ರಿಯೆಯಂತೆ ಇದು. ಸಿರಿಗರ, ಗತ ಎನ್ನುವ ಪದಗಳನ್ನು ನಾನು ದಾಸರಿಂದ ಪಡೆದಿರುತ್ತೇನೆ. ಇದರಲ್ಲಿ ನನ್ನದೆನ್ನುವುದು ಏನಿದೆ? ಯಶಸ್ವಿ ಕವಿತೆ ಎಂದರೆ ಅದರಲ್ಲಿ ತುಂಬಾ ಜನರ ಯಶಸ್ಸಿದೆ.

ಚಿಕ್ಕವರಿರುವಾಗ ಕವಿಗಳಿಗೆ ಇದು ನನ್ನದೇ ಕವಿತೆ. ನಾನು ಅದ್ಭುತವಾಗಿ ಕವಿತೆ ಬರೆದಿದೀನಿ ಅಂತೆಲ್ಲ ಅನಿಸೋದು ತುಂಬಾ ಸಹಜ. ಆದರೆ ಲಕ್ಷಾಂತರ ಕವಿತೆಗಳನ್ನು ಓದಿದ ನಂತರ ನನಗೀಗ ನನ್ನ ಕವಿತೆಗಳು ನನ್ನದು ಮಾತ್ರ ಅಂತ ಅನಿಸುತ್ತಿಲ್ಲ. ನನ್ನ ಕವಿತೆ ಎಲ್ಲರ ಕವಿತೆ ಅಂತ ಅನಿಸತ್ತೆ. ನನ್ನ ಕವಿತೆಯನ್ನು ಯಾರಾದರೂ ಅವರ ಹೆಸರಲ್ಲಿ ಪ್ರಕಟಿಸಿದರೂ ನನಗೆ ಬೇಸರ ಆಗಲ್ಲ. ಬದಲಿಗೆ ಕದ್ದಿದ್ದು